ರಾಜಶೇಖರ ಕುಳ್ಳೂರಗೆ ರಾಜ್ಯ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ

ಉದಯಕಾಲ ನ್ಯೂಸ್

ಗೋಕಾಕ: ಸಮೀಪದ ಹುಣಶ್ಯಾಳ ಪಿ.ಜಿ ಗ್ರಾಮದ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ರಾಜಶೇಖರ ರಾಮಪ್ಪ ಕುಳ್ಳೂರ ಅವರು ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಯನ್ನು ಗುರುತಿಸಿ ಅವರಿಗೆ ಯುವ ವಾಹಿನಿ ಜನ ಸೇವಾ ಟ್ರಸ್ಟ ಹಾಗೂ ನಾಡಿನ ಸಮಾಚಾರ ಸೇವಾ ಸಂಘ ಆಶ್ರಯದಲ್ಲಿ ಬೆಳಗಾವಿಯ ಕನ್ನಡ ಭವನ ಸಭಾಂಗಣದಲ್ಲಿ ಜರುಗಿದ ಎಲ್ಲ ಶಿಕ್ಷಕರ ದಿನಾಚರಣೆ ಪ್ರಯುಕ್ತ ಶಿಕ್ಷಕರ ಸಂಗಮ ಸಾಧನೆಯ ಸಂಭ್ರಮ ಸಮಾರಂಭದಲ್ಲಿ ರಾಜ್ಯ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಸಮಾರಂಭ ಅಧ್ಯಕ್ಷತೆಯನ್ನು ಬೆಳಗಾವಿ ಸಂಸದ ಜಗದೀಶ್ ಶೆಟ್ಟರ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಬಿಜೆಪಿ ನಗರ ಮಂಡಲ ಅಧ್ಯಕ್ಷ ಭೀಮಶಿ ಭರಮಣ್ಣವರ, ಯುವ ಮುಖಂಡ ಶಶಿ ಕಣ್ಣಪ್ಪನವರ, ನಿವೃತ್ತ ಪ್ರಧಾನ ಗುರು ಶ್ರೀಕಾಂತ ಹಂಚಿನಾಳ, ಸಿಆರ್‌ಪಿ ಸುಭಾಷ್ ಪಾಟೀಲ, ಟ್ರಸ್ಟನ ಅಧ್ಯಕ್ಷ ಪ್ರದೀಪ ನಾಗನೂರ, ಸಂಘದ ಅಧ್ಯಕ್ಷ ಬಸವರಾಜ ಉಪ್ಪಾರಹಟ್ಟಿ, ಮುತ್ತೆಪ್ಪ ಕುಳ್ಳೂರ, ರಾಮನಾಯ್ಕ ನಾಯಿಕ, ಶಿವಣ್ಣಾ ಕುಳ್ಳೂರ, ಪರುಶರಾಮ ಮೇಲ್ಮಟ್ಟಿ, ಅಡಿವೆಪ್ಪ ಎಂಟೆತ್ತಿನವರ, ಭೀಮಶಿ ಪಾಟೀಲ, ಬಾಳಾರಾಮ ಕುಳ್ಳೂರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಬಸವರಾಜ ಕಟ್ಟೀಮನಿ ಜನ್ಮದಿನೋತ್ಸವ: ಶೋಷಿತರ ಪರ ಧ್ವನಿ ಎತ್ತಿದ ದಿಟ್ಟ ಸಾಹಿತಿ ಸ್ಮರಣೆ

ಉದಯಕಾಲ ನ್ಯೂಸ್

ಬೆಳಗಾವಿ: ನಾಡಿನ ಖ್ಯಾತ ಪ್ರಗತಿಶೀಲ ಸಾಹಿತಿ ಬಸವರಾಜ ಕಟ್ಟೀಮನಿ ಅವರ ಜನ್ಮದಿನೋತ್ಸವವನ್ನು ನಗರದ ಮಹಾಂತೇಶ ನಗರದ ಮಹಾಂತ ಭವನದಲ್ಲಿ ಅತ್ಯಂತ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕರ್ನಾಟಕ ಸರ್ಕಾರದ ಬಸವರಾಜ ಕಟ್ಟೀಮನಿ ಪ್ರತಿಷ್ಠಾನ ಹಾಗೂ ಮ.ನ.ರ. ಸಂಘದ ಶಿಕ್ಷಣ ಮಹಾವಿದ್ಯಾಲಯದ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಈ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ಮತ್ತು ಕಥಾ ವಾಚನ ಕಾರ್ಯಕ್ರಮಗಳು ಯಶಸ್ವಿಯಾಗಿ ನೆರವೇರಿದವು.

ಶೋಷಣಾರಹಿತ ಸಮಾಜ ಕಟ್ಟಿದ ದಿಟ್ಟ ಬರಹಗಾರ: ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಹಿರಿಯ ವಿಮರ್ಶಕ ಡಾ. ಗುರುಪಾದ ಮರಿಗುದ್ದಿ, ಕಟ್ಟೀಮನಿಯವರ ಬರಹಗಳು ರೈತರು, ಕಾರ್ಮಿಕರು ಮತ್ತು ಶೋಷಿತರ ಪರ ಧ್ವನಿ ಎತ್ತುವ ಮೂಲಕ ಕನ್ನಡ ಸಾಹಿತ್ಯ ಲೋಕದಲ್ಲಿ ಹೊಸ ಸಂಚಲನ ಮೂಡಿಸಿದವು. ಮಾಲೀಕರ ಮರ್ಜಿಗೆ ಒಳಗಾಗದೇ, 'ಬರೆದೇ ಬದುಕುತ್ತೇನೆ' ಎಂಬ ಹಠ ತೊಟ್ಟಿದ್ದ ಅವರು, ತಮ್ಮ ಕೃತಿಗಳ ಮೂಲಕ ಸಮಾಜದ ಅನ್ಯಾಯ, ಭ್ರಷ್ಟಾಚಾರ, ಜಾತೀಯತೆ ಹಾಗೂ ಅಸ್ಪೃಶ್ಯತೆಯ ವಿರುದ್ಧ ಲೇಖನಿಯನ್ನೇ ಖಡ್ಗದಂತೆ ಝಳಪಿಸಿದರು. ತತ್ವಾದರ್ಶಗಳಿಗೆ ಬದ್ಧರಾಗಿ ಒಂಟಿಯಾಗಿಯಾದರೂ ಬದುಕಿದ ಅಪರೂಪದ ಸಾಹಿತಿ ಅವರು ಎಂದು ಬಣ್ಣಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಪ್ರತಿಷ್ಠಾನದ ಅಧ್ಯಕ್ಷ ಡಾ. ಯಲ್ಲಪ್ಪ ಹಿಮ್ಮಡಿ ಮಾತನಾಡಿ, ಸಾಮಾಜಿಕ ಹೊಣೆಗಾರಿಕೆಯಿಂದ ಬರೆಯುವುದು ಮತ್ತು ವಿಷಮತೆಗಳನ್ನು ಎದುರಿಸಿ ನಿಲ್ಲುವುದು ನೈಜ ಸಾಹಿತಿಯ ಲಕ್ಷಣ. ಇಂತಹ ಗುಣ ಹೊಂದಿದ್ದ ಕಟ್ಟೀಮನಿಯವರ ಪ್ರಗತಿಪರ ವಿಚಾರಗಳನ್ನು ಯುವ ಪೀಳಿಗೆಗೆ ತಲುಪಿಸುವ ಕಾರ್ಯವನ್ನು ಪ್ರತಿಷ್ಠಾನ ನಿರಂತರವಾಗಿ ಮಾಡುತ್ತಿದೆ ಎಂದರು. ಪ್ರತಿಷ್ಠಾನದ ಸದಸ್ಯ ಡಾ. [illegible] ಎಂ. ಶಿಂದೆ ಪ್ರಾಸ್ತಾವಿಕವಾಗಿ ಮಾತನಾಡಿ, ವಿದ್ಯಾರ್ಥಿಗಳು ಕಟ್ಟೀಮನಿಯವರ ಆತ್ಮಕಥೆಯನ್ನು ಓದಿ ಪ್ರೇರಣೆ ಪಡೆಯಬೇಕೆಂದು ಕರೆ ನೀಡಿದರು.

ಎರಡನೇ ಗೋಷ್ಠಿಯ ಅಧ್ಯಕ್ಷತೆಯನ್ನು ಪ್ರಾಂಶುಪಾಲರಾದ ಡಾ. ನಿರ್ಮಲಾ ಬಟ್ಟಲ ವಹಿಸಿದ್ದರು.

ಬೆಳಗಾವಿ ಸರ್ಕಾರಿ ಪದವಿ ಮಹಿಳಾ ಕಾಲೇಜಿನ ಉಪನ್ಯಾಸಕ ಡಾ. ಅ. ಬ. ಇಟಗಿ ಅವರು 'ಆಧುನಿಕ ಬಸವಣ್ಣ ಕಾದಂಬರಿ ಸಮಕಾಲೀನಗೊಳ್ಳುವ ಶರಣರ ಆಂದೋಲನ' ವಿಷಯದ ಕುರಿತು ಉಪನ್ಯಾಸ ನೀಡಿ, 12ನೇ ಶತಮಾನದ ಶರಣ ತತ್ವಗಳು ಇಂದಿನ ಸಮಾಜಕ್ಕೆ ಹೇಗೆ ಪ್ರಸ್ತುತವಾಗಿವೆ ಎಂಬುದನ್ನು ವಿವರಿಸಿದರು. ನಂತರ ನಡೆದ ಗೋಷ್ಠಿಯಲ್ಲಿ ಕು. ಮುಸ್ಕಾನ್ ಲಾಡನವರ, ಕು. ಪೂನಮ್ ಟೋಪಾಯಿ ಹಾಗೂ ಕು. ಸುಮಾ ಹವಾಲದಾರ ಅವರು ಕಟ್ಟೀಮನಿಯವರ ಆಯ್ದ ಕಥೆಗಳನ್ನು ಸ್ವಾರಸ್ಯಕರವಾಗಿ ವಾಚಿಸಿದರು.

ಕಾರ್ಯಕ್ರಮದಲ್ಲಿ ಪ್ರತಿಷ್ಠಾನದ ಸದಸ್ಯರಾದ ಡಾ. ಕೆ.ಆರ್ ಸಿದ್ದಗಂಗಮ್ಮ, ಹಮೀದಾಬೇಗಂ ದೇಸಾಯಿ, ವಿಠ್ಠಲ ದಳವಾಯಿ ಹಾಗೂ ಹಲವು ಸಾಹಿತಿಗಳು, ಶಿಕ್ಷಣಾಧಿಕಾರಿಗಳು, ಕಾಲೇಜಿನ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಕು. ಪ್ರಿಯಾಂಕ ಅನಗೋಳಕರ್ ಮತ್ತು ಕು. ಸ್ನೇಹಲತಾ ಮದನ್ನವರ ನಾಡಗೀತೆ ಹಾಡಿದರು. ಪ್ರೊ. ರೂಪಾ ಅಕ್ಕಿ ಸ್ವಾಗತಿಸಿದರೆ, ಪ್ರೊ. ಸೋನಲ್ ಚಿನಿವಾಲ ನಿರೂಪಿಸಿ, ಪ್ರೊ. ಮಂಜುನಾಥ ಕಲಾಲ್ ವಂದಿಸಿದರು.

ಕುಡಿಯುವ ನೀರಿನ ಸಮಸ್ಯೆಯಾಗದಂತೆ ಮುನ್ನೆಚ್ಚರಿಕೆ ವಹಿಸಿ: ಆನಂದ್ ಪ್ರಕಾಶ್ ಮೀನಾ

ಉದಯಕಾಲ ನ್ಯೂಸ್

ವಿಜಯಪುರ: ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಮುನ್ನೆಚ್ಚರಿಕಾ ಕ್ರಮ ಕೈಗೊಂಡು, ಬಾಕಿ ಇರುವ ಜಲಜೀವನ್ ಮಿಷನ್ ಕಾಮಗಾರಿಗಳನ್ನು ಡಿಸೆಂಬರ್ 2026ರೊಳಗೆ ಪೂರ್ಣಗೊಳಿಸಬೇಕು ಎಂದು ಜಿಲ್ಲಾ ಪಂಚಾಯತಿ ಸಿಇಒ ಆನಂದ್ ಪ್ರಕಾಶ್ ಮೀನಾ ಅಧಿಕಾರಿಗಳಿಗೆ ಸೂಚಿಸಿದರು.

ಇಲ್ಲಿನ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಸೋಮವಾರ ನಡೆದ ಜಿಲ್ಲಾ ನೀರು ಮತ್ತು ನೈರ್ಮಲ್ಯ ಮಿಷನ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಲಜೀವನ್ ಮಿಷನ್‌ನ 1,000 ಕಾಮಗಾರಿಗಳ ಪೈಕಿ 841 ಪೂರ್ಣಗೊಂಡಿದ್ದು, ಉಳಿದ ಕಾಮಗಾರಿಗಳಿಗೆ ವೇಗ ನೀಡಬೇಕು. ಜಿಲ್ಲೆಯ 4.64 ಲಕ್ಷ ಗ್ರಾಮೀಣ ಮನೆಗಳ ಪೈಕಿ 4.16 ಲಕ್ಷ ಮನೆಗಳಿಗೆ ಕಾರ್ಯಾತ್ಮಕ ನಳ ಸಂಪರ್ಕ ಕಲ್ಪಿಸಲಾಗಿದ್ದು, ಬಾಕಿ ಮನೆಗಳಿಗೂ ಡಿಸೆಂಬರ್ ಅಂತ್ಯದೊಳಗೆ ಸಂಪರ್ಕ ಕಲ್ಪಿಸಬೇಕು ಎಂದರು.

ಜಿಲ್ಲೆಯ 654 ಗ್ರಾಮಗಳ ಪೈಕಿ 379 ಗ್ರಾಮಗಳು 'ಹರ್ ಘರ್ ಜಲ್' ಅಡಿಯಲ್ಲಿ ಪ್ರಮಾಣೀಕರಿಸಲ್ಪಟ್ಟಿದ್ದು, ಬಾಕಿ 275 ಗ್ರಾಮಗಳ ಪ್ರಮಾಣೀಕರಣವನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು. ಕುಡಿಯುವ ನೀರಿನ ಸಮಸ್ಯಾತ್ಮಕ ಗ್ರಾಮಗಳನ್ನು ಗುರುತಿಸಿ, ಪ್ರತಿ ವಾರ ಪರಿಸ್ಥಿತಿ ಪರಿಶೀಲಿಸಿ ಜಿಲ್ಲಾ ಪಂಚಾಯಿತಿಗೆ ವರದಿ ಸಲ್ಲಿಸುವಂತೆ ತಿಳಿಸಿದರು.

ಟ್ರಾನ್ಸ್‌ಫಾರ್ಮರ್ ಅನುದಾನವನ್ನು ನಿಯಮಾನುಸಾರ ಬಳಸಬೇಕು. ಅನಗತ್ಯ ಕೊಳವೆಬಾವಿ ಕೊರೆಯುವುದನ್ನು ಕಡಿಮೆ ಮಾಡಿ, ಈಗಾಗಲೇ ಕೊರೆದ ಕೊಳವೆಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಆದ್ಯತೆ ನೀಡಬೇಕು.

ಜಲಧಾರೆ ಯೋಜನೆಯ ಸ್ಕೀಮ್-1ರ ಕಾಮಗಾರಿ ಶೇ.86 ಹಾಗೂ ಸ್ಕೀಮ್-2ರ ಕಾಮಗಾರಿ ಶೇ.75ರಷ್ಟು ಪೂರ್ಣಗೊಂಡಿದ್ದು, ಉಳಿದ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು. ಸ್ಕೀಮ್-1ರ 53 ಹಾಗೂ ಸ್ಕೀಮ್-2ರ 39 ಓವರ್‌ಹೆಡ್ ಟ್ಯಾಂಕ್‌ಗಳಿಗೆ ಅಗತ್ಯ ಜಾಗ ಖರೀದಿಸಿ ಕಾಮಗಾರಿ ಕೈಗೊಳ್ಳಬೇಕು. ಸ್ಕೀಮ್-1ರ ಕಾಮಗಾರಿಗಳನ್ನು ಡಿಸೆಂಬರ್ 2026ರೊಳಗೆ ಪೂರ್ಣಗೊಳಿಸಿ, ಮಾರ್ಚ್ 2027ರೊಳಗೆ ಪ್ರಾಯೋಗಿಕ ಚಾಲನೆ ನೀಡುವಂತೆ ಸೂಚನೆ ನೀಡಿದರು.

ಶಾಲೆ ಹಾಗೂ ಅಂಗನವಾಡಿಗಳಿಗೆ ಬಾಕಿ ಇರುವ ನಳ ಸಂಪರ್ಕ ಕಲ್ಪಿಸಲು ಕ್ರಮ ಕೈಗೊಳ್ಳಬೇಕು. ನೀರಿನ ಮಾದರಿ ಪರೀಕ್ಷೆಯನ್ನು ತ್ರೈಮಾಸಿಕ ಗುರಿಯಂತೆ ಕಡ್ಡಾಯವಾಗಿ ಪೂರ್ಣಗೊಳಿಸಬೇಕು ಎಂದರು.

ಸಭೆಯಲ್ಲಿ ಜಿಪಂ ಉಪ ಕಾರ್ಯದರ್ಶಿ ಪ್ರಕಾಶ ವಡ್ಡರ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರ ವರ್ಧಮಾನ ಗೊಂಗಡಿ, ವಿವಿಧ ಉಪವಿಭಾಗಗಳ ಅಧಿಕಾರಿಗಳು ಹಾಗೂ ಜಲಧಾರೆ ಯೋಜನೆಯ ಪಿಎಂಸಿ ತಂಡದವರು ಉಪಸ್ಥಿತರಿದ್ದರು.

ಹೆಸರುಕಾಳಿಗೆ ಬೆಂಬಲ ಬೆಲೆ , 7 ತಾಲೂಕುಗಳಲ್ಲಿ ಖರೀದಿ ಕೇಂದ್ರ ಆರಂಭ

ಉದಯಕಾಲ ನ್ಯೂಸ್

ವಿಜಯಪುರ: 2026ನೇ ಸಾಲಿನ ಮುಂಗಾರು ಹಂಗಾಮಿನ ಎಫ್‌ಎಕ್ಯೂ ಗುಣಮಟ್ಟದ ಹೆಸರುಕಾಳನ್ನು ಕೇಂದ್ರ ಸರ್ಕಾರದ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಪ್ರತಿ ಕ್ವಿಂಟಾಲ್‌ಗೆ ₹8,780 ಬೆಂಬಲ ಬೆಲೆಯಲ್ಲಿ ಖರೀದಿಸಲು ನಿರ್ಧರಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ. ಆನಂದ ಕೆ. ತಿಳಿಸಿದ್ದಾರೆ.

ಅಕ್ಟೋಬರ್ 5ರಂದು ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ನಡೆದ ಕನಿಷ್ಠ ಬೆಂಬಲ ಬೆಲೆ ಜಿಲ್ಲಾ ಕಾರ್ಯಪಡೆ ಸಮಿತಿ ಸಭೆಯಲ್ಲಿ ಈ ಕುರಿತು ನಿರ್ಧಾರ ಕೈಗೊಳ್ಳಲಾಗಿದೆ. ರೈತರ ನೋಂದಣಿಗೆ 80 ದಿನ ಹಾಗೂ ಖರೀದಿ ಪ್ರಕ್ರಿಯೆಗೆ 90 ದಿನಗಳ ಕಾಲಾವಕಾಶ ನೀಡಲಾಗಿದೆ.

ವಿಜಯಪುರ, ಬಸವನಬಾಗೇವಾಡಿ, ಮುದ್ದೇಬಿಹಾಳ, ಸಿಂದಗಿ, ಇಂಡಿ, ಚಡಚಣ ಹಾಗೂ ಬಬಲೇಶ್ವರ ತಾಲೂಕುಗಳ ಟಿಎಪಿಸಿಎಂಎಸ್ ಸಂಸ್ಥೆಗಳಲ್ಲಿ ಹಾಗೂ ಬಬಲೇಶ್ವರ ತಾಲೂಕಿನ ಪಿಕೆಪಿಎಸ್‌ನಲ್ಲಿ ಹೆಸರುಕಾಳು ಖರೀದಿ ಕೇಂದ್ರಗಳನ್ನು ಗುರುತಿಸಲಾಗಿದೆ.

ಪ್ರತಿ ರೈತರಿಂದ ಪ್ರತಿ ಎಕರೆಗೆ ಗರಿಷ್ಠ 4 ಕ್ವಿಂಟಾಲ್ ಹಾಗೂ ಒಬ್ಬ ರೈತನಿಂದ ಗರಿಷ್ಠ 20 ಕ್ವಿಂಟಾಲ್ ಹೆಸರುಕಾಳು ಖರೀದಿಸಲಾಗುವುದು. ಖರೀದಿಸಿದ ಉತ್ಪನ್ನದ ಹಣವನ್ನು ಮೂರು ದಿನಗಳೊಳಗೆ ರೈತರ ಆಧಾರ್ ಜೋಡಣೆಯಾದ ಬ್ಯಾಂಕ್ ಖಾತೆಗೆ ಡಿಬಿಟಿ ಮೂಲಕ ಜಮೆ ಮಾಡಲಾಗುವುದು.

ಪ್ರಸ್ತುತ ಮಾರುಕಟ್ಟೆಯಲ್ಲಿ ಹೆಸರುಕಾಳು ಕ್ವಿಂಟಾಲ್‌ಗೆ ₹7,500ರಿಂದ ₹8,000ರ ವರೆಗೆ ಮಾರಾಟವಾಗುತ್ತಿದ್ದು, ಬೆಂಬಲ ಬೆಲೆ ಯೋಜನೆಯಡಿ ₹8,780 ದೊರೆಯಲಿದೆ. ರೈತರು ಯೋಜನೆಯ ಸೌಲಭ್ಯ ಪಡೆದುಕೊಳ್ಳುವಂತೆ ಜಿಲ್ಲಾಡಳಿತ ಮನವಿ ಮಾಡಿದೆ.

ಖರೀದಿ ಪ್ರಕ್ರಿಯೆಯ ಮೇಲ್ವಿಚಾರಣೆಗೆ ಆಯಾ ತಾಲೂಕಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಕಾರ್ಯದರ್ಶಿಗಳನ್ನು ತಾಲೂಕು ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕೆಎಸ್‌ಸಿಎಂಎಫ್ ಶಾಖಾ ವ್ಯವಸ್ಥಾಪಕರ ಮೊಬೈಲ್ ಸಂಖ್ಯೆ 8722687143 ಸಂಪರ್ಕಿಸಬಹುದು ಎಂದು ಕೃಷಿ ಮಾರಾಟ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಸೂರ್ಯಕಾಂತಿಗೆ ಬೆಂಬಲ ಬೆಲೆ: 13 ಖರೀದಿ ಕೇಂದ್ರಗಳಲ್ಲಿ ನೋಂದಣಿ ಆರಂಭ

ಉದಯಕಾಲ ನ್ಯೂಸ್

ವಿಜಯಪುರ: 2026ನೇ ಸಾಲಿನ ಮುಂಗಾರು ಹಂಗಾಮಿನ ಎಫ್‌ಎಕ್ಯೂ ಗುಣಮಟ್ಟದ ಸೂರ್ಯಕಾಂತಿಯನ್ನು ಕೇಂದ್ರ ಸರ್ಕಾರದ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಪ್ರತಿ ಕ್ವಿಂಟಾಲ್‌ಗೆ ₹8,343 ಬೆಂಬಲ ಬೆಲೆಯಲ್ಲಿ ಖರೀದಿಸಲು ರೈತರ ನೋಂದಣಿ ಹಾಗೂ ಖರೀದಿ ಪ್ರಕ್ರಿಯೆ ಆರಂಭಿಸುವಂತೆ ಜಿಲ್ಲಾಧಿಕಾರಿ ಡಾ. ಆನಂದ ಕೆ. ಸೂಚಿಸಿದ್ದಾರೆ.

ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ನಡೆದ ಕನಿಷ್ಠ ಬೆಂಬಲ ಬೆಲೆ ಕಾರ್ಯಪಡೆ ಸಮಿತಿ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದ್ದು, ರೈತರ ನೋಂದಣಿಗೆ 80 ದಿನ ಹಾಗೂ ಖರೀದಿಗೆ 90 ದಿನಗಳ ಕಾಲಾವಕಾಶ ನಿಗದಿಪಡಿಸಲಾಗಿದೆ. ಬಬಲೇಶ್ವರ, ಸವನಹಳ್ಳಿ, ಬೆಳ್ಳುಬ್ಬಿ, ತಾಜಪುರ, ವಿಜಯಪುರ, ಮುದ್ದೇಬಿಹಾಳ, ತಾಳಿಕೋಟಿ, ತಂಗಡಗಿ, ಇಂಡಿ, ಚಡಚಣ, ಹಲಸಂಗಿ, ಸಿಂದಗಿ ಹಾಗೂ ಬಸವನಬಾಗೇವಾಡಿ ಸೇರಿದಂತೆ 13 ಕಡೆ ಖರೀದಿ ಕೇಂದ್ರಗಳನ್ನು ತೆರೆಯಲಾಗಿದೆ. ನಾಫೆಡ್ ಹಾಗೂ ಎನ್‌ಸಿಸಿಎಫ್ ಕೇಂದ್ರ ಸರ್ಕಾರದ ಖರೀದಿ ಏಜೆನ್ಸಿಗಳಾಗಿದ್ದು, ಕರ್ನಾಟಕ ಸಹಕಾರಿ ಎಣ್ಣೆಬೀಜ ಬೆಳೆಗಾರರ ಮಹಾಮಂಡಳ ರಾಜ್ಯ ಮಟ್ಟದ ಖರೀದಿ ಏಜೆನ್ಸಿಯಾಗಿದೆ.

ಪ್ರತಿ ರೈತರಿಂದ ಪ್ರತಿ ಎಕರೆಗೆ ಗರಿಷ್ಠ 4 ಕ್ವಿಂಟಾಲ್ ಹಾಗೂ ಒಬ್ಬ ರೈತನಿಂದ ಗರಿಷ್ಠ 20 ಕ್ವಿಂಟಾಲ್ ಸೂರ್ಯಕಾಂತಿಯನ್ನು ಖರೀದಿಸಲಾಗುವುದು. ಖರೀದಿಸಿದ ಉತ್ಪನ್ನದ ಹಣವನ್ನು ಮೂರು ದಿನಗಳೊಳಗೆ ಆಧಾರ್ ಜೋಡಣೆಯಾದ ಬ್ಯಾಂಕ್ ಖಾತೆಗೆ ಡಿಬಿಟಿ ಮೂಲಕ ಜಮೆ ಮಾಡಲಾಗುವುದು.

ಜಿಲ್ಲೆಯಲ್ಲಿ 6,641 ಹೆಕ್ಟೇರ್ ಪ್ರದೇಶದಲ್ಲಿ ಸೂರ್ಯಕಾಂತಿ ಬಿತ್ತನೆಯಾಗಿದ್ದು, 79,692 ಕ್ವಿಂಟಾಲ್ ಇಳುವರಿ ನಿರೀಕ್ಷಿಸಲಾಗಿದೆ. ಪ್ರಸ್ತುತ ಮಾರುಕಟ್ಟೆಯಲ್ಲಿ ಕ್ವಿಂಟಾಲ್‌ಗೆ ₹7,000ರಿಂದ ₹7,300ರ ವರೆಗೆ ಬೆಲೆ ಇದ್ದು, ಬೆಂಬಲ ಬೆಲೆ ಯೋಜನೆಯಡಿ ₹8,343 ದೊರೆಯಲಿದೆ. ರೈತರು ಯೋಜನೆಯ ಸದುಪಯೋಗ ಪಡೆದುಕೊಳ್ಳುವಂತೆ ಜಿಲ್ಲಾಡಳಿತ ಮನವಿ ಮಾಡಿದೆ.

ಪಶ್ಚಿಮ ಪದವೀಧರರ ಕ್ಷೇತ್ರ ಚುನಾವಣೆ: ಚುನಾವಣಾ ವೀಕ್ಷಕರಾಗಿ ಡಾ. ವಿಶಾಲ್ ಆರ್ ನೇಮಕ

ಉದಯಕಾಲ ನ್ಯೂಸ್

ಬೆಳಗಾವಿ: ಕರ್ನಾಟಕ ವಿಧಾನ ಪರಿಷತ್ತಿನ ಪಶ್ಚಿಮ ಪದವೀಧರರ ಕ್ಷೇತ್ರದ ದ್ವೈವಾರ್ಷಿಕ ಚುನಾವಣೆ-2026ಕ್ಕೆ ಸಂಬಂಧಿಸಿದಂತೆ ಭಾರತ ಚುನಾವಣಾ ಆಯೋಗವು ಐಎಎಸ್ ಅಧಿಕಾರಿ ಡಾ. ವಿಶಾಲ್ ಆರ್. ಅವರನ್ನು ಚುನಾವಣಾ ವೀಕ್ಷಕರನ್ನಾಗಿ ನೇಮಿಸಿದೆ.

ಚುನಾವಣೆಗೆ ಸಂಬಂಧಿಸಿದಂತೆ ಸಾರ್ವಜನಿಕರಿಗೆ ಯಾವುದೇ ದೂರು ಅಥವಾ ಅಹವಾಲುಗಳಿದ್ದಲ್ಲಿ ವೀಕ್ಷಕರ ಇ-ಮೇಲ್ ವಿಳಾಸ vishal-ravi@rediffmail.com ಹಾಗೂ vishal.r@nic.in ಮೂಲಕ ನೇರವಾಗಿ ತಿಳಿಸಬಹುದು ಅಥವಾ ಹುಬ್ಬಳ್ಳಿಯ ಗೋಪನಕೊಪ್ಪದ ಕಾರ್ಪೊರೇಟ್ ಆಫೀಸ್‌ನಲ್ಲಿರುವ ಲೈಸನ್ ಅಧಿಕಾರಿ ಮಹಮ್ಮದ ಕೈರುಖ ಇವರ ಮೊಬೈಲ್ ಸಂಖ್ಯೆ 9164055006 ಗೆ ಸಂಪರ್ಕಿಸಬಹುದಾಗಿದೆ ಎಂದು ಕರ್ನಾಟಕ ಪಶ್ಚಿಮ ಪದವೀಧರರ ಮತಕ್ಷೇತ್ರದ ಚುನಾವಣಾಧಿಕಾರಿಗಳು ಹಾಗೂ ಬೆಳಗಾವಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಕೆ.ಎಂ. ಜಾನಕಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗುರುವಿನ ಕೃಪೆಯ ಜೊತೆಗೆ ಶಿಷ್ಯನಲ್ಲಿ ಶ್ರದ್ಧೆ: ಗುರುಸಿದ್ದ ಮಹಾಸ್ವಾಮಿಗಳು

ಉದಯಕಾಲ ನ್ಯೂಸ್

ಬೆಳಗಾವಿ: ಗುರುವಿನ ಕೃಪೆ ಮತ್ತು ಮಾರ್ಗದರ್ಶನ ಇದ್ದರೆ ಸಾಮಾನ್ಯ ವ್ಯಕ್ತಿಯೂ ಅಸಾಧಾರಣ ಸಾಧನೆ ಮಾಡಲು ಸಾಧ್ಯ. ಗುರು ಬದುಕುವ ದಾರಿಯನ್ನು, ಸಂಸ್ಕಾರವನ್ನು ಮತ್ತು ಸನ್ಮಾರ್ಗವನ್ನು ತೋರುವ ಮಹಾನ ಚೇತನ. ಗುರುವಿನ ಕೃಪೆಯ ಜೊತೆಗೆ ಶಿಷ್ಯನಲ್ಲಿ ಶ್ರದ್ಧೆ, ವಿನಯ ಮತ್ತು ಕಠಿಣ ಪರಿಶ್ರಮ ಇದ್ದಾಗ ಯಾವುದೇ ವ್ಯಕ್ತಿ ಮಹಾಪುರುಷನಾಗಬಲ್ಲ ಎಂದು ಕಾರಂಜಿ ಮಠದ ಗುರುಸಿದ್ದ ಮಹಾಸ್ವಾಮಿಗಳು ಅಭಿಪ್ರಾಯಪಟ್ಟರು.

ಅವರು ಅ. 6ರಂದು ಶಿವಬಸವ ನಗರದ ಕಾರಂಜಿ ಮಠದಲ್ಲಿ 304ನೆಯ ಮಾಸಿಕ ಶಿವಾನುಭವ ಹಾಗೂ ಹಾನಗಲ್ ಕುಮಾರ ಶಿವಯೋಗಿಗಳ 159ನೇ ಜಯಂತಿ ಮಹೋತ್ಸವದ ಸಮಾರಂಭದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದ ಹುಕ್ಕೇರಿ ವಿರಕ್ತ ಮಠದ ಶಿವಬಸವ ಮಹಾಸ್ವಾಮಿಗಳು ಹಾನಗಲ್ ಕುಮಾರ ಶಿವಯೋಗಿಗಳ ಜೀವನ, ಸಾಧನೆ, ಸಮಾಜಕ್ಕೆ ನೀಡಿದ ಕೊಡುಗೆ ಸದಾ ಸ್ಮರಣೀಯವಾದುದು. ಕಡುಬಡತನದಲ್ಲಿ ಹುಟ್ಟಿ ಬೆಳೆದು ಶ್ರಮಪಟ್ಟು ಜ್ಞಾನಗಳಿಸಿದ ಶಿವಯೋಗಿಗಳು, ಸಮಾಜದ ಜನರನ್ನು ಸಂಸ್ಕಾರವಂತರನ್ನಾಗಿಸಲು ಸ್ವಾಮಿಗಳಿಗೆ ತರಬೇತಿ ನೀಡುವ ಶಿವಯೋಗ ಮಂದಿರ ಪ್ರಾರಂಭಿಸಿದರು. ವಚನ ಪಿತಾಮಹ ಫ.ಗು. ಹಳಕಟ್ಟಿ ಅವರಿಂದ ವಚನ ಸಾಹಿತ್ಯವನ್ನು ಸಂಸ್ಕರಿಸುವಂತೆ ಪ್ರೇರಣೆ ನೀಡಿದರು. ಹುಟ್ಟು ಕುರುಡರಾಗಿದ್ದ ಗಾನಯೋಗಿ ಪಂಚಾಕ್ಷರಿ ಗವಾಯಿಗಳಿಗೆ ಸಂಗೀತಜ್ಞಾನ ಕಲಿಸಿ ಈ ನಾಡಿನ ಕಲೆ, ಸಾಹಿತ್ಯ, ಸಂಗೀತ, ಶಿಕ್ಷಣ ಸೇವೆ ಮಾಡಲು ಪ್ರೇರೇಪಿಸಿದರು ಎಂದು ಅವರು ಶಿವಯೋಗಿಗಳ ಸಾಧನೆ ಸ್ಮರಿಸಿದರು.

ವಿಶ್ರಾಂತ ಪ್ರಾಚಾರ್ಯ ಡಾ. ಎಂ.ಎಸ್. ಇಂಚಲ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಡಾ. ಬಸವರಾಜ ಜಗಜಂಪಿ, ಡಾ. ಎಮ್. ವಿ. ಮಾನ್ವಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಕರ್ನಾಟಕ ಪ್ರೆಸ್ ಕ್ಲಬ್ ವತಿಯಿಂದ 2026ನೇ ಸಾಲಿನ ಶಿಕ್ಷಣ ಸೇವಾ ರತ್ನ ಪ್ರಶಸ್ತಿ ಪಡೆದ ಯರಗಟ್ಟಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಕಿರಣ ಚೌಗಲಾ ಅವರನ್ನು ಸನ್ಮಾನಿಸಲಾಯಿತು.

ಪ್ರಾರಂಭದಲ್ಲಿ ಪ್ರೊ. ಎ.ಬಿ. ದೊಡಮನಿ ಸ್ವಾಗತಿಸಿದರು. ಕಾರಂಜಿ ಮಠದ ಕುಮಾರೇಶ್ವರ ಪಾಠಶಾಲೆಯ ಮಕ್ಕಳು ಪ್ರಾರ್ಥಿಸಿದರು. ಪ್ರಾಧ್ಯಾಪಕ ಎ.ಕೆ. ಪಾಟೀಲ ನಿರೂಪಿಸಿದರು. ಕೊನೆಗೆ ನ್ಯಾಯವಾದಿ ವಿ.ಕೆ. ಪಾಟೀಲ ವಂದಿಸಿದರು.

ಅರ್ಜಿ ಆಹ್ವಾನ

ಉದಯಕಾಲ ನ್ಯೂಸ್

ಬೆಳಗಾವಿ: 2026-27ನೇ ಸಾಲಿನ ಎಸ್.ಎಮ್. ಎಮ್.ಎಸ್. ಪರೀಕ್ಷೆಯು ಅಕ್ಟೋಬರ್ 20, 2026 ರಂದು ಜರುಗಲಿದ್ದು, ಈ ಪರೀಕ್ಷೆಗೆ ಸರಕಾರಿ, ಅನುದಾನಿತ ಹಾಗೂ ಸ್ಥಳೀಯ ಸಂಸ್ಥೆಗಳ ಶಾಲೆಗಳಲ್ಲಿ 8 ನೇ ತರಗತಿಯಲ್ಲಿ ಓದುತ್ತಿರುವ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅಕ್ಟೋಬರ್ 31ರ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿದ್ದು ಹೆಚ್ಚಿನ ಮಾಹಿತಿಗಾಗಿ ಕೆ.ಎಸ್.ಕ್ಯೂ.ಎ.ಎ.ಸಿ ವೆಬ್ ಸೈಟ್ ನಿಂದ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಹಾಗೂ ಸಂಬಂಧಿಸಿದ ಶಾಲಾ ಮುಖ್ಯ ಶಿಕ್ಷಕರಿಂದ ಮಾಹಿತಿ ಪಡೆಯಬಹುದು ಎಂದು ಮಣ್ಣೂರ ಬೆಳಗಾವಿ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

U GRO CAPITAL
U GRO ಕ್ಯಾಪಿಟಲ್ ಲಿಮಿಟೆಡ್
ಬಿ -17, ... ಮುಂಬೈ- 400070
ಸ್ವಾಧೀನ ಸೂಚನೆ ಅನುಬಂಧ IV (ನಿಯಮ 8(1) ನೋಡಿ) (ಸ್ಥಿರ ಆಸ್ತಿಗಾಗಿ)
[illegible]

ಕ್ರಮ ಸಂಖ್ಯೆ	ಸಾಲಗಾರರ ವಿವರಗಳು	ಡಿಮ್ಯಾಂಡ್ ನೋಟಿಸ್	ಆಸ್ತಿಯ ವಿವರ	ಸ್ವಾಧೀನ ದಿನಾಂಕ
1	[illegible]	ಡಿಮ್ಯಾಂಡ್ ನೋಟಿಸ್ ದಿನಾಂಕ 10/07/2026 ರೂ. 77,41,479.00/- [illegible]	[illegible]	05-10-2026

ಸ್ಥಳ: [illegible] ದಿನಾಂಕ: 07/10/2026 ಸಹಿ- (ಅಧಿಕೃತ ಅಧಿಕಾರಿ) UGRO ಕ್ಯಾಪಿಟಲ್ ಲಿಮಿಟೆಡ್

U GRO CAPITAL
U GRO ಕ್ಯಾಪಿಟಲ್ ಲಿಮಿಟೆಡ್
ಬಿ -17, ... ಮುಂಬೈ- 400070
ಸ್ವಾಧೀನ ಸೂಚನೆ ಅನುಬಂಧ IV (ನಿಯಮ 8(1) ನೋಡಿ) (ಸ್ಥಿರ ಆಸ್ತಿಗಾಗಿ)
[illegible]

ಕ್ರಮ ಸಂಖ್ಯೆ	ಸಾಲಗಾರರ ವಿವರಗಳು	ಡಿಮ್ಯಾಂಡ್ ನೋಟಿಸ್	ಆಸ್ತಿಯ ವಿವರ	ಸ್ವಾಧೀನ ದಿನಾಂಕ
1	1) [illegible] 2) [illegible] 3) [illegible] 4) [illegible] 5) [illegible] HCFMUD SEC00001025858	ಡಿಮ್ಯಾಂಡ್ ನೋಟಿಸ್ ದಿನಾಂಕ 10/07/2026 ರೂ. 21,46,315.00/- [illegible] 07.07.2026 ರಂತೆ	[illegible]	05-10-2026

ಸ್ಥಳ: [illegible] ದಿನಾಂಕ: 07/10/2026 ಸಹಿ- (ಅಧಿಕೃತ ಅಧಿಕಾರಿ) UGRO ಕ್ಯಾಪಿಟಲ್ ಲಿಮಿಟೆಡ್

UJJIVAN SMALL FINANCE BANK
[illegible] CST ನಂ.5212 ರಿಂದ 5217/00 [illegible] 587301
ಇ-ಹರಾಜು ಸೂಚನೆ
[illegible]

ಕ್ರಮ ಸಂಖ್ಯೆ	ಸಾಲ ಖಾತೆ ಸಂಖ್ಯೆ / ಸಾಲಗಾರರ ಹೆಸರು	(i) 13-2 ನೋಟಿಸ್ ದಿನಾಂಕ ಮತ್ತು ಮೊತ್ತ (ii) ಸ್ವಾಧೀನ ದಿನಾಂಕ	ಬಾಕಿ ಮೊತ್ತ	INR ನಲ್ಲಿ ಮೀಸಲು ಬೆಲೆ	ಅರ್ನೆಸ್ಟ್ ಮನಿ ಠೇವಣಿ (EMD) INR ನಲ್ಲಿ
1	11742... 1) [illegible] 2) [illegible]	(i) 02.06.2021 ... (ii) ಸ್ವಾಧೀನ ದಿನಾಂಕ 17.12.2023	03.10.2026 ರಂತೆ [illegible]	ರೂ. 10,30,000/-	ರೂ. 1,03,000/-

[illegible]
ಇ-ಹರಾಜಿನ ದಿನಾಂಕ ಮತ್ತು ಸಮಯ: 28.10.2026 ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.00 ರವರೆಗೆ
ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 27.10.2026 [illegible]
ಆಸ್ತಿಯ ತಪಾಸಣೆ ದಿನಾಂಕ ಮತ್ತು ಸಮಯ: 20.10.2026 [illegible]
ಹೆಚ್ಚಿನ ವಿವರಗಳಿಗಾಗಿ ಬ್ಯಾಂಕ್ ಅಧಿಕೃತ ಅಧಿಕಾರಿ - ಶ್ರೀ ಮುರಳೀಕೃಷ್ಣನ್ - 7092117837 ಅಥವಾ ... - 98431 14222
[illegible] https://www.bankeauctions.com [illegible] https://www.ujjivansfb.in/e-auction [illegible] support@bankeauctions.com [illegible]
https://www.ujjivansfb.in/e-auctions/ https://www.bankeauctions.com
ದಿನಾಂಕ: 07.10.2026 ಸಹಿ- ಅಧಿಕೃತ ಅಧಿಕಾರಿ ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್

Chola
ಚೋಳಮಂಡಲಮ್ ಇನ್ವೆಸ್ಟ್‌ಮೆಂಟ್ ಅಂಡ್ ಫೈನಾನ್ಸ್ ಕಂಪನಿ ಲಿಮಿಟೆಡ್
[illegible] ಚೆನ್ನೈ - 600 001. ತ.ನಾ.
ಇ-ಹರಾಜು ಮಾರಾಟ ಸೂಚನೆ (ಮಾರಾಟ ಇ-ಬಿಡ್ಡಿಂಗ್ ಮೂಲಕ ಮಾತ್ರ)
ನಿಯಮ 8(6) ಮತ್ತು 9(1)ರ ... 2002 ರ ... ಸ್ಥಿರ ಆಸ್ತಿಗಳ ಮಾರಾಟ ಸೂಚನೆ
[illegible] https://www.cholamandalam.com & www.auctionfocus.in [illegible]

ಕ್ರ. ಸಂ.	ಸಾಲ ಖಾತೆ ಸಂ./ಸಾಲಗಾರರ/ ಸಹ-ಸಾಲಗಾರರ ಹೆಸರು	ಬೇಡಿಕೆ ಸೂಚನೆ ದಿನಾಂಕ ಮತ್ತು ಮೊತ್ತ	ಸ್ಥಿರ ಆಸ್ತಿ ವಿವರ		ಮೀಸಲು ಬೆಲೆ (ರೂ.) / ಅರ್ನೆಸ್ಟ್ ಹಣ (ರೂ.)	ಹರಾಜು ದಿನಾಂಕ & ಸಮಯ
1	ಸಾಲ ಖಾತೆ ಸಂಖ್ಯೆ: HL25BEL... [illegible] ಬೆಳಗಾವಿ, ಕರ್ನಾಟಕ - 591311 [illegible] 591311	ರೂ. 20,87,118/- [illegible] 10-02-2026 ರಂತೆ	[illegible]	ಭೌತಿಕ ಸ್ವಾಧೀನ	ರೂ. 35,29,440/- [illegible] ರೂ. 3,52,944/- [illegible]	26.10.2026 [illegible]

ಪರಿಶೀಲನೆ ದಿನಾಂಕ ಮತ್ತು ಸಮಯ: 22.10.2026 ... 11.00 ... 4.00 ... ಬಿಡ್ ಹೆಚ್ಚಳ ಮೊತ್ತ: ರೂ. 10,000/-
[illegible] 23.10.2026 ... 05.00 ...
[illegible] 9731219256 ಇ-ಮೇಲ್ ಐಡಿ : mahanteshhu@chola.murugappa.com, 2. ಶ್ರೀ ರವಿಕುಮಾರ್ ... 9742449049 ಇ-ಮೇಲ್ ಐಡಿ : ravikumark@chola1.murugappa.com [illegible]
ದಿನಾಂಕ: 05.10.2026 ಸ್ಥಳ: ಬೆಳಗಾವಿ, ಕರ್ನಾಟಕ ಸಹಿ/- ಅಧಿಕೃತ ಅಧಿಕಾರಿ ಚೋಳಮಂಡಲಮ್ ಇನ್ವೆಸ್ಟ್‌ಮೆಂಟ್ ಅಂಡ್ ಫೈನಾನ್ಸ್ ಕಂಪನಿ ಲಿಮಿಟೆಡ್

Udayakala is published by K.N.Puttalingaiah from no 1576, Rame Gowda Building, 2nd floor, V.V.Road, Mandya-571 401 on behalf of Anikethana Publication and Printers edited by K.N.Puttalingaiah and Printed by M.N.S. PRINTERS PVT LTD. 345/4, Bhattarahalli Near K R Puram, RTO Old Madras Road, Bengaluru- 560049 and also printed at Elegant Offset Printers Pvt Ltd Sy no. 650/3, Uchagaon- Belgundi ByPass Road, Uchagaon, Belgaum -501128, Manipal Media Network Limited Udayavani Building, Udayavani Road Manipal - 576 104, Manipal Media Network Ltd. Sy No. 7/2, Plat No. Ca-3/1, 28(D) &29 Kapnoor 2nd Stage, Industrial Area, Kapnoor Village Kalaburagi Taluka Kalaburagi,ELEGANT OFFSET PRINTERSPVT LTD Plat No-33/1, 15/1 (Eastern Part) MT Sagar Industrial Estate Gokul Road Hubballi -580030. ELEGANT OFFSET PRINTERS PVT LTD, SHREE LAKSHMINARAYANA RICE MILL SHREE SHANKARMUTT ROAD, Shimoga- 577 201. All rights reserved. Reproduction in whole or in part without written permission is prohibited. RNI REG NO. 71090/97.Volume:30 Issue: 113